<u>ದಿ : **14-08-2025** ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಭೋಧಿಸಲಾಯಿತು.</u>

ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿದೆ. ಸದರಿ ಪ್ರಮಾಣಪತ್ರವನ್ನು ತಯಾರಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿದ್ದೇನೆ. ಅದರಲ್ಲಿರುವ ಅಂಶಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ.

**<u>ಮುಂದುವರಿದ ಮುಖ್ಯ ವಿಚಾರಣೆ: ಪ್ರತಿವಾದಿ ಪರ ವಕೀಲರಾದ ಶ್ರೀ ಎಂ.ಎಂ.ಹೆಚ್ ರವರಿಂದ</u>**

**1)** ದಿನಾಂಕ **17-04-1975**ರ ಕ್ರಯ ಪತ್ರದ ಮೂಲ ಪ್ರತಿ

**2)** ನನ್ನ ಅಜ್ಜನಾದ ಪುಟ್ಟ ಪೂಜಾರಿಯ ಮರಣ ಸಮರ್ಥನಾ ಪತ್ರ

**3)** ನಾನು, ನನ್ನ ಸಹೋದರ ಹಾಗೂ ಸಹೋದರಿಯರು ದಿನಾಂಕ **22-02-2014**ರ ನೊಂದಾಯಿತ ವಿಭಾಗ ಪತ್ರದ ಮೂಲ ಪ್ರತಿ

**4)** ನನ್ನ ಹೆಂಡತಿಗೆ ನಾನು ಮಾಡಿರುವ ನೊಂದಾಯಿತ ದಾನ ಪತ್ರದ ಮೂಲ ಪ್ರತಿ ಹಾಜರು ಮಾಡಿದ್ದೇನೆ.

ಸದರಿ ದಾಖಲೆಗಳನ್ನು ಕ್ರಮವಾಗಿ **ನಿ.ಡಿ - 2 ರಿಂದ 5** ರಿಂದ ಎಂದು ಗುರುತಿಸಲಾಯಿತು.

ನನ್ನ ಅಜ್ಜನಾದ ಪುಟ್ಟ ಪೂಜಾರಿಯು ನನ್ನ ಮತ್ತು ನನ್ನ ತಾಯಿ ಪರವಾಗಿ ಮಾಡಿರುವ **ಮರಣ ಶಾಸನ**ವನ್ನು ಹಾಜರು ಮಾಡಿದ್ದೇನೆ.

<u>ಪಾಟೀ **ಸವಾಲು :**</u> ವಾದಿಗಳ ಪರ ವಕೀಲರ ಕೋರಿಕೆಯ ಮೇರೆಗೆ ಸಾಕ್ಷಿ ಪಾಟೀ ಸವಾಲನ್ನು ಮುಂದುಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸ ಇ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಕುಂದಾಪುರ**